Government of Karnataka

Deposition Sheet Form No. R.P. 57

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಲಿಂಗಸಗೂರ

ಸಿ.ಸಿ ನಂಬರ 2197/2024

ಸಿ ಡಬ್ಲ್ಯೂ-4
ಪಿ ಡಬ್ಲ್ಯೂ-4

| | | |
|---|---|---|
| ಸಾಕ್ಷಿದಾರರ ಹೆಸರು | ಃ- | ಹುಸೇನಬಿ |
| ಗಂಡನ ಹೆಸರು | ಃ- | ಮೈನುದ್ದೀನಸಾಬ |
| ವಯಸ್ಸು | ಃ- | 42 ವರ್ಷ |
| ಉದ್ಯೋಗ | ಃ- | ಮನೆಕಲಸ |
| ವಾಸಸ್ಥಳ | ಃ- | ಯರಗುಂಟಿ |

**ದಿ.24-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.**

***ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ.***

ಚಾ.ಸಾ-2 ಮತ್ತು 3 ನಮ್ಮೂರಿನವರು. ಚಾ.ಸಾ-1 ನನ್ನ ಮಗಳು. ಚಾ.ಸಾ-5 ನನ್ನ ಗಂಡ. ಚಾ.ಸಾ-6 ಮತ್ತು 7 ನಮ್ಮೂರಿನವರು. ಆರೋಪಿ ನಮ್ಮೂರಿನವರು ಪರಿಚಯ ಇದೆ. ಆರೋಪಿತನು ಚಾ.ಸಾ-1 ರವರಿಗೆ ಯಾವುದೇ ಲೈಂಗಿಕ ಕಿರುಕುಳ ನೀಡಿಲ್ಲ ಮತ್ತು ಅವರನ್ನು ಹಿಂಬಾಲಿಸಿಲ್ಲ ಅವರ ಮಾನಕ್ಕೆ ಕುಂದುಂಟಾಗುವಂತೆ ವರ್ತಿಸಿಲ್ಲ ಹಾಗೂ ಅವಾಚ್ಯವಾಗಿ ಬೈದು ಜೀವ ಬೆದರಿಕೆ ಹಾಕಿಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

**(ಮಾನ್ಯ ಎಪಿಪಿ ಅವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲಿಗೆ ಅನುಮತಿ ಕೇಳಿರುತ್ತಾರೆ. ಅನುಮತಿ ನೀಡಲಾಯಿತು.)**

**ಪಾಟೀ ಸವಾಲು: ಎಪಿಪಿ ಅವರಿಂದ:-**

1ನೆ ಆರೋಪಿ ನಮ್ಮ ಮನೆಯ ಮುಂದೆ ಹೋಗುವಾಗ ಆಟೋವನ್ನು ಜೋರಾಗಿ ನಡೆಸುತ್ತಾ ಅದರಲ್ಲಿ ಜಾನಪದ ಹಾಡುಗಳನ್ನು ಜೋರಾಗಿ ಹಾಕುತ್ತಾ ನಮ್ಮ ಮನೆಯ ಕಡೆ ನೋಡುತ್ತಾ ಸಿಳ್ಳೆ ಹಾಕುತ್ತಾ ಓಡಾಡುತ್ತಿದ್ದನು ಎಂದರೆ ಸರಿಯಲ್ಲ. ಅದೇ ರೀತಿ ಚಾ.ಸಾ-1 ರವರು ಯರಗುಂಟಿ ಗ್ರಾಮದಲ್ಲಿ ಹೊರಗಡೆ ಹೋದರೆ 1ನೇ ಆರೋಪಿ ಚಾ.ಸಾ-1 ರವರನ್ನು ಹಿಂಬಾಲಿಸುವುದು ಅವರು ಸುಮ್ಮನಿದ್ದರೂ ಸಹ ಕೆಟ್ಟ ದೃಷ್ಟಿಯಿಂದ ನೋಡುವುದು ಮತ್ತು

ಅವರ ಗಂಡನ ಮೊಬೈಲಿಗೆ ಪೋನ್ ಮಾಡಿ ನೀನು ನನಗೆ ಇಷ್ಟವಾಗಿದ್ದೀಯಾ ನಾವು ಇಬ್ಬರೂ ಎಲ್ಲಿಗಾದರೂ ಹೋಗೋಣ ನಿನ್ನ ಗಂಡನನ್ನು ಬಿಟ್ಟು ಬಾ ಎಂದು ಇಲ್ಲ ಸಲ್ಲದ ಆರೋಪ ಮಾಡಿರುತ್ತಾನೆ ಎಂದರೆ ಸರಿಯಲ್ಲ.

2. ದಿನಾಂಕ 22-06-2024 ರಂದು ರಾತ್ರಿ 9-30 ಕ್ಕೆ ಯರಗುಂಟಿ ಗ್ರಾಮದಲ್ಲಿ ಇದ್ದಾಗ ಆರೋಪಿ ತನ್ನ ಮೊಬೈಲ್ ಇಸ್ಟಾಗ್ರಾಮ್ ಐ.ಡಿ ನಂ.my-jaanu-ssssss ಇದಕ್ಕೆ ಚಾ.ಸಾ-1 ರವರ ಪೋಟೋಕ್ಕೆ ತನ್ನ ಪೋಟೋ ಸೇರಿಸಿ ಸ್ಟೇಟಸ್ ಇಟ್ಟಿದ್ದು ಇರುತ್ತದೆ ಎಂದರೆ ಸರಿಯಲ್ಲ. ಇದನ್ನು ಚಾ.ಸಾ-1 ರವರ ಗಂಡ ನೋಡಿ ಪೋನ್ ಮಾಡಿ ತಿಳಿಸಿರುತ್ತಾನೆ ಎಂದರೆ ಸರಿಯಲ್ಲ. ಆಗ ನಾನು. ಚಾ.ಸಾ-1 ಮತ್ತು 5 ರವರು ದಿನಾಂಕ 23-06-2024 ರಂದು ಬೆಳಿಗ್ಗೆ 10-00 ಕ್ಕೆ ಆರೋಫಿತನ ಮನೆಗೆ ಕೇಳಲು ಹೋದಾಗ ಆರೋಪಿತನು ತನ್ನ ಮನೆಯ ಮುಂದೆ ಇದ್ದು ನನಗೆ ಮತ್ತು ಚಾ.ಸಾ-1 ಮತ್ತು 5 ರವರಿಗೆ ಕೂಡಿ ಈ ರೀತಿಯಾಗಿ ನೀನು ಸಲ್ಮಾ ಬೇಗಂ ಇವರ ಪೋಟೋ ಇಸ್ಟಾಗ್ರಾಮನಲ್ಲಿ ಬಿಟ್ಟಿದ್ದೀಯಾ ಇದರಿಂದ ಅವರ ಸಂಸಾರ ಹಾಳಾಗಿದೆ ಆಕೆಯನ್ನು ಗಂಡನ ಮನೆಯಲ್ಲಿ ಕರೆದುಕೊಳ್ಳುತ್ತಿಲ್ಲ ಎಂದು ಕೇಳಿದಾಗ ಆರೋಪಿತನು ಚಾ.ಸಾ-1 ರವರಿಗೆ ನೀನು ಬಹಳ ಇಷ್ಟವಾಗಿದ್ದೀಯಾ ನಿನಗೆ ನಾನು ಬಿಡುವದಿಲ್ಲ ಎಂದು ಚುಡಾಯಿಸಿರುತ್ತಾನೆ ಎಂದರೆ ಸರಿಯಲ್ಲ. ನೀವು ಈ ವಿಷಯ ಕೇಳಲು ಮನೆತನಕ ಬಂದಿದ್ದೀಯಾ ಸೂಳೆ ಎಂದು ಅವಾಚ್ಯವಾಗಿ ಬೈದಿರುತ್ತಾನೆ ಎಂದರೆ ಸರಿಯಲ್ಲ. ಆಗ ಚಾ.ಸಾ-6 ಮತ್ತು 7 ರವರ ಜಗಳ ಬಿಡಿಸಿರುತ್ತಾನೆ ಎಂದರೆ ಸರಿಯಲ್ಲ. ಇದೇ ರೀತಿ ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಿರಾಕರಿಸಿದ ಹೇಳಿಕೆಯನ್ನು ನಿ.ಪಿ-5 ಎಂದು ಗುರುತಿಸಲಾಯಿತು. ಈಗ ನಾನು ಮತ್ತು ಆರೋಪಿ ರಾಜೀಯಾಗಿರುತ್ತೇವೆ. ರಾಜಿಯಾದ ಕಾರಣ ನಿ.ಪಿ-5 ರಲ್ಲಿರುವ ವಿಷಯ ಗೊತ್ತಿದ್ದರೂ ಸಹ ಆರೋಪಿತರಿಗೆ ಶಿಕ್ಷೆಯಿಂದ ತಪ್ಪಿಸಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಶ್ರೀ ಎಸ್.ಜಿ.ಪಿ ವಕೀಲರಿಂದ : -**

ಏನೂ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಲಿಂಗಸಗೂರು.